# ದಲಿತ ಚಳುವಳಿಯ ಭಾಷೆ ಮತ್ತು ಸಾಹಿತ್ಯ.

**ಕಾಂತರಾಜ ಯಾದವ್ ಸಿ.**
ಸಂಶೋಧನಾರ್ಥಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ.

Article Link: https://aksharasurya.com/2023/08/kantharajyadav-c/

**ABSTRACT:**
ದಲಿತ ಸಾಹಿತ್ಯದಲ್ಲಿನ ಬಡತನ, ಶೋಷಣೆ, ಹಸಿವು, ಆಕ್ರೋಶ, ಸಿಟ್ಟು, ಸಂಸ್ಕೃತಿ ಇತ್ಯಾದಿ ವಿಷಯಗಳನ್ನು ಕುರಿತು ಹಲವಾರು ಸಾಹಿತಿಗಳು, ವಿಮರ್ಶಕರು ವಿಶ್ಲೇಷಿಸಿದ್ದಾರೆ. ಈ ವಿಷಯಗಳನ್ನು ಮುಖಾಮುಖಿಯಾಗಲು ದಲಿತ ಸಾಹಿತಿಗಳು ಬಳಸಿದ ವಿಭಿನ್ನ ರೀತಿಯ ಭಾಷೆಯನ್ನು ಕುರಿತು ಕೆಲವೇ ಜನರು ಮಾತ್ರ ತಮ್ಮ ಗಮನಹರಿಸಿದ್ದು ವಿಶೇಷ. ಅದರಲ್ಲೂ ಸಿದ್ಧಲಿಂಗಯ್ಯನವರ ಹೊಲೆ–ಮಾದಿಗರ ಹಾಡು, ದೇವನೂರರ ಕುಸುಮಬಾಲೆ ಇತ್ಯಾದಿ ಕೆಲವೇ ಕೃತಿಗಳ ಭಾಷೆಯ ಕುರಿತು ಮಾತನಾಡುತ್ತಾರೆ ಹೊರತು ಅದರಿಂದಾಚೆಗೆ ಒಟ್ಟು ದಲಿತ ಸಾಹಿತ್ಯದ ಭಾಷೆಯ ಭಿನ್ನತೆ, ನಿರೂಪಣೆ ಕುರಿತು ಮಾತನಾಡುವುದು ಕಡಿಮೆ ಎಂದೇ ಹೇಳಬಹುದು. ಸಾಹಿತ್ಯವಾಗಲಿ, ವಿಮರ್ಶೆಯಾಗಲಿ ಭಾಷೆಯ ಅಭಿವ್ಯಕ್ತಿ ಮುಖ್ಯವಾದದ್ದು. ಆ ನಿಟ್ಟಿನಲ್ಲಿ ದಲಿತ ಸಾಹಿತ್ಯದ ಭಾಷೆಯು ಕಟ್ಟಿಕೊಡುವ ವಿಭಿನ್ನ ನೋಟ ವಿಶಿಷ್ಟವಾದದ್ದು. ಈ ರೀತಿಯ ಭಾಷೆಯ ಬಳಕೆಗೆ ತಮ್ಮ ಬದುಕನ್ನು ಮತ್ತು ಸಂಸ್ಕೃತಿಯನ್ನು ಏಕಕಾಲದಲ್ಲಿ ಜನರೆದುರು ತೆರೆದಿಡುವ ಅಗತ್ಯತೆಯನ್ನು ದಲಿತ ಸಾಹಿತಿಗಳು ಕಂಡುಕೊಂಡದ್ದು ಮುಖ್ಯವಾದದ್ದು.

**KEYWORDS:** ದಲಿತ, ಭಾಷೆ, ಸಾಹಿತ್ಯ, ಹಸಿವು, ಚಳವಳಿ, ಗ್ರಾಮ್ಯಭಾಷೆ.

ಕನ್ನಡ ಭಾಷೆ, ಸಾಹಿತ್ಯದ ನೆಲೆಯಲ್ಲಿ 'ದಲಿತ' ಭಾಷೆ ಮತ್ತು ಸಾಹಿತ್ಯ ಎರಡೂ ನೆಲೆಯಲ್ಲಿ ಕನ್ನಡ ಜಗತ್ತಿಗೆ ಹೊಸ ಆಯಾಮವೊಂದನ್ನು ತೆರೆದಿಟ್ಟಿರುವುದನ್ನು ನಾವು ಕಾಣಬಹುದು. ಶೋಷಿತ ಸಮುದಾಯಗಳು ಅಕ್ಷರವನ್ನೇ ಕಾಣದಿದ್ದ ಸಂದರ್ಭದಲ್ಲಿ 'ಅಕ್ಷರ' ಮಾರ್ಗಕ್ಕೆ ತೆರೆದುಕೊಳ್ಳುವ ಮೂಲಕ ಕನ್ನಡ ಸಾಹಿತ್ಯಲೋಕಕ್ಕೆ ಹೊಸದೊಂದು ಭಾಷೆಯ ಆಯಾಮವನ್ನೇ ತೆರೆಯಿತು. ಕೆ. ಬಿ. ಸಿದ್ದಯ್ಯನವರು ಹೇಳುವಂತೆ "ನೀನು ಯಾರು ಹೆತ್ತ ಮಗನೋ ಏನೋ! ನನ್ನ ಮುಟ್ಟಿದೆ, ನಿನ್ನ ಸ್ಪರ್ಶ ಮಾತ್ರದಿಂದಲೇ ನಾನು ಬಂಧಮುಕ್ತನಾದೆ. ಈ ನಾಡಿನ

ಅಸ್ಪೃಶ್ಯನೋ, ಸ್ತ್ರೀಯೋ ನನ್ನ ಮುಟ್ಟಿದರೆ ಬಂಧನದಿಂದ ಬಿಡುಗಡೆ ಆಗುವೆನೆಂಬ ಅರಿವು ಮೈದೋರಿತು"[1] ಈ ಮಾತುಗಳು ಕನ್ನಡ ಸಾಹಿತ್ಯದ, ಭಾಷೆಯ, ಶೋಷಿತ ಮತ್ತು ಶ್ರಮಸಮುದಾಯ ಎಲ್ಲದಕ್ಕೂ ಬಿಡುಗಡೆಯನ್ನೇ ನೀಡಿತು. 'ಅಕ್ಷರ'ದಿಂದ ವಂಚಿತವಾಗಿದ್ದ ಸಮುದಾಯಗಳ ನೋವು, ಹತಾಶೆ, ಹಸಿವು, ಸಿಟ್ಟು, ಸಂತಸ, ಆಕ್ರೋಶ ಇವೆಲ್ಲವೂ ಸಾಹಿತ್ಯದಿಂದ ಹೊರಗೇ ನಿಂತು ಕಾಯುತ್ತಿದ್ದವು. ಅದಕ್ಕೆ ಸೂಕ್ತ ಸಂದರ್ಭವೊಂದು ಒದಗಿ ಬಂದದ್ದು ದಲಿತ ಮತ್ತು ಬಂಡಾಯ ಸಾಹಿತ್ಯದಲ್ಲಿ.

ಕನ್ನಡ ಸಾಹಿತ್ಯದಲ್ಲಿ ದಲಿತರ ಕುರಿತ ಚಿತ್ರಣವೊಂದು ನವೋದಯ ಸಾಹಿತ್ಯ ಸಂದರ್ಭದಲ್ಲೇ ಬಂತಾದರೂ ಅದು ದಲಿತರ ಪೂರ್ಣಪ್ರಮಾಣದ ಚಿತ್ರಣವಲ್ಲ. ಡಾ. ಕೆ. ಶಿವರಾಮಕಾರಂತರಂತಹ ಶ್ರೇಷ್ಠ ಲೇಖಕರು 'ಚೋಮನದುಡಿ'ಯ ಮೂಲಕ ಆವರೆಗೂ ಸಾಹಿತ್ಯದಲ್ಲಿ ಕೇವಲ ಪಾತ್ರಗಳ ನೆಲೆಯಲ್ಲಿದ್ದಂತಹ ದಲಿತ ಸಮುದಾಯವನ್ನು ಪೂರ್ಣಪ್ರಮಾಣದ ಕಾದಂಬರಿಯ ಮಟ್ಟಕ್ಕೆ ಏರಿಸಿದ್ದು ಅವರ ಮಹತ್ತು ಎನ್ನಬೇಕು. ಚೋಮನದುಡಿ ಕನ್ನಡದ ದಲಿತ ಬರಹಗಳ ಸಾಲಿನಲ್ಲಿ ಆದ್ಯ ಕೃತಿಯಾಗಿದ್ದು, ಶ್ರೇಷ್ಟ ಕಾದಂಬರಿಯಾಗಿಯೂ ಇದೆ. ಈ ಕೃತಿಯಲ್ಲಿನ ಇರುವ ಮುಖ್ಯ ಕೊರತೆಯೆಂದರೆ ಮೊದಲನೆಯದು ಭಾಷೆ. ಎರಡನೆಯದು ಕಾದಂಬ–ರಿಕಾರರೇ ಹೇಳುವಂತೆ "ನನ್ನ ಗ್ರಾಮ ಜೀವನದ ಸುತ್ತಾಟದಲ್ಲಿ ಹತ್ತಾರು ಹೊಲೆಯರ ಮನೆಗಳನ್ನು ಕಂಡಿದ್ದೆ, ಅವರ ಜೀವನವನ್ನು ಸಾಕಷ್ಟು ನೋಡಿದ್ದೆ, ಅವರ ಹುಟ್ಟೂರುಗಳಿಂದ ಹಿಡಿದು, ಶ್ರಮಿಸುವ ಕಾಫಿತೋಟಗಳಿಗೂ ಹೋಗಿಬಂದಿದ್ದೆ. ಅದನ್ನೇ ಐದು ದಿನಗಳಲ್ಲಿ ಚೋಮನದುಡಿಯ ರೂಪಕೊಟ್ಟು ಬರೆದು ಮುಗಿಸಿದೆ"[2] ಎನ್ನುತ್ತಾರೆ. ಕಾದಂಬರಿಯು ದೂರದಿಂದ ಗಮನಿಸಿದಾಗ ಕಂಡಂತಹ, ಪ್ರತ್ಯಕ್ಷ ಕಥನದ ಅಂಶಗಳಿಂದಲೇ ಪ್ರಧಾನವಾಗಿ ರೂಪುಗೊಂಡಿರುವುದನ್ನು ನಾವು ಕಾರಂತರ ಮಾತುಗಳಲ್ಲಿ ಕಾಣಬಹುದು. ಅಂದರೆ ಅದು ಅನುಭವಾತ್ಮಕ ನೆಲೆಯದು, ನಿಜ ಅನುಭವದ್ದಲ್ಲ ಎಂಬುದನ್ನು ನೆನೆಯಬಹುದು. ಈ ಹಿನ್ನೆಲೆಯಲ್ಲಿ ಮೊದಲನೆಯ ಕೊರತೆಯಾದ ಭಾಷೆಯನ್ನು ಗಮನಿಸಬಹುದು. ಕಾರಂತರು ಚೋಮನನ್ನು ಚಿತ್ರಿಸುವಾಗ ಚೋಮನಿಗೆ ನಿಜವಾಗಿಯೂ ಇಡೀ ಕಾದಂಬರಿಯಲ್ಲಿ ಅವನಿಗೆ ಭಾಷೆಯಿಲ್ಲ. ಇದಕ್ಕೆ ಕಾರಣ ಚೋಮನು ಹೊಲೆಯನಾಗಿದ್ದು ಕಾರಂತರು ಅವರ ಕೇರಿ, ಗ್ರಾಮಗಳಲ್ಲಿ ಓಡಾಟದ ಮೂಲಕವಷ್ಟೇ ಅವರನ್ನು ಗಮನಿಸಿದ್ದು ಒಡನಾಡದೆ ಇದ್ದದ್ದು. ಚೋಮನಿಗೆ ಇರುವುದು ಒಂದೇ ಭಾಷೆ ಅದು 'ದುಡಿ'. ಸಂತಸ, ದುಃಖ, ಹಸಿವು, ನೋವು ಯಾವುದಕ್ಕೂ ಅವನು ಬಳಸುವ ಭಾಷೆ ದುಡಿ ಬಾರಿಸುವುದೊಂದೇ. ಚೋಮನ ಪ್ರತಿಭಟನೆಯ ಭಾಷೆಯೂ 'ದುಡಿ'ಯೇ ಆಗಿದೆ.

ಆ ದುಡಿಯು ಭಾಷೆಯಾಗಿಯೂ, ಸಂಸ್ಕೃತಿಯಾಗಿಯೂ ಕಾದಂಬರಿಯಲ್ಲಿದೆ. ಚೋಮನಾಗಿ ಮಾತನಾಡುವುದು ನಿರೂಪಕರಾದ ಕಾರಂತರೇ ಹೊರತು ಚೋಮನಲ್ಲ. ಇದಕ್ಕೆ ಕಾದಂಬರಿಯ ಈ ಪ್ರಸಂಗ ಉತ್ತಮ ಉದಾಹರಣೆ. "ನೀಲನ ಶವವೇನೋ ಮೇಲಕ್ಕೆ ಬಂದಿತು, ಪ್ರಾಣವಿರಲಿಲ್ಲ. ಚೋಮನ ಬಾಯಿಂದ ಸೊಲ್ಲು ಹೊರಡಲಿಲ್ಲ. ಚೋಮನಿಗೆ ಹೊಲೆಯನ ಬಾಳ್ವೆಯ ಹುಣ್ಣು ಎಂಥದೆಂಬುದು ಆಗ ಸಂಪೂರ್ಣ ಅನುಭವವಾಯಿತು. ಶವವನ್ನು ಹೊತ್ತು ಮನೆಗೆ ತಂದ."[3] ಇದು ಒಂದು ಸಾವಿನ ಚಿತ್ರಣ ಇಲ್ಲಿ ದಲಿನಾದ ಚೋಮ ತನ್ನ ಮಗನನ್ನು ಕಳೆದುಕೊಂಡು ಮೌನವಾಗಿದ್ದಾನೆ. ಆ ಸಂಧರ್ಭದಲ್ಲಿ ಸಮಾಜದಲ್ಲಿದ್ದ ಜಾತಿ ತಾರತಮ್ಯ, ಮಡಿ ಮೈಲಿಗೆಯ, ಅಸ್ಪೃಶ್ಯತೆಯ ಬಗ್ಗೆ ಆತನ ಮನದಾಳದಲ್ಲಿ ಅದೆಷ್ಟು ಸಿಟ್ಟು, ಅಸಹನೆ, ಕೋಪ, ಬದುಕಿನ ಕುರಿತು ಹತಾಶೆ ಉಂಟಾಗಿರುತ್ತದೆ. ಈ ಎಲ್ಲಾ ನೋವುಗಳಿಗೂ ಚೋಮನದು ಮೌನ ಭಾಷೆ. ಮನೆಯಲ್ಲಿದ್ದ ಚನಿಯ, ಗುರುವ, ಬೆಳ್ಳಿ, ಕಾಳ ಇವರೂ ಕೂಡ ಮೌನ. ನೀಲನ ಶವ ಸಂಸ್ಕಾರದ ನಂತರ ತನ್ನ ನೋವಿಗೆ ದುಡಿಯನ್ನು ಬಾರಿಸುತ್ತಾನೆ ಚೋಮ.

ಕೇವಲ ಇದೊಂದು ಸನ್ನಿವೇಶದಲ್ಲಿ ಮಾತ್ರವಲ್ಲ ತಾನು ನಿರಾಕರಣೆಗೊಂಡ, ಅವಮಾನಗೊಂಡ ಪ್ರತಿ ಸಂದರ್ಭದಲ್ಲೂ ಚೋಮನ ಭಾಷೆ ಮೌನ ಮತ್ತು ದುಡಿ ಅಷ್ಟೇ. ಕಾರಂತರು ತಮ್ಮ ಪ್ರದೇಶದ ಹೊಲೆಯರ ಬದುಕನ್ನು ಚಿತ್ರಿಸಿದ್ದಾರೆ. ಆಮೂಲಕ ಭೂಮಿಯ ಕುರಿತಾದ ಪ್ರಶ್ನೆಯನ್ನೂ ಎತ್ತಿದ್ದಾರೆ. ಆದರೆ ಆ ಸಮುದಾಯಕ್ಕೆ ಇರಬೇಕಾಗಿದ್ದ ಭಾಷೆಯನ್ನು ಕಾದಂಬರಿಯಲ್ಲಿ ಬಳಸಿಲ್ಲ. ಅಲ್ಲಿನ ನಿಜ ಅನುಭವಗಳು 'ದುಡಿ'ಯಲ್ಲಿ ಸಾಂಕೇತಿಕವಾಗಿ ಬಿಂಬಿಸುತ್ತವೆ. ಇಲ್ಲಿ ಮೌನವಾಗಿದ್ದ ಚೋಮನ ಮಕ್ಕಳು 70ರ ದಶಕದಲ್ಲಿ ಸಿದ್ಧಲಿಂಗಯ್ಯನವರ ಮೂಲಕ ಮಾತನಾಡುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲೇ ಕಾರಂತರು ಚೋಮನದುಡಿಯ ಮೂಲಕ ತಮ್ಮದೇ ಭಾಷೆಯಲ್ಲಿ ದಲಿತರನ್ನು ಸಾಹಿತ್ಯದ ಮುನ್ನೆಲೆಗೆ ತರುವ ಪ್ರಯತ್ನವನ್ನು ಮಾಡಿದ್ದಾರೆ. ಇಲ್ಲದಿದ್ದರೆ ಚೋಮನು ಮಾತನಾಡಲು ಇನ್ನೆಷ್ಟು ದಶಕಗಳು ಬೇಕಾಗಿತ್ತೋ? ಚೋಮನ ಮಕ್ಕಳು ಮಾತನಾಡಲಿಕ್ಕೆ ಇನ್ನೆಷ್ಟು ಸಮಯ ಬೇಕಿತ್ತೋ ತಿಳಿಯದು.

ಈ ಲೇಖನದಲ್ಲಿ ನಾನು ಮುಖ್ಯವಾಗಿ ಆಯ್ದುಕೊಂಡಿರುವುದು ದಲಿತ ಭಾಷೆ ಮತ್ತು ಸಾಹಿತ್ಯ. ಈ ಹಿನ್ನೆಲೆಯಲ್ಲಿ ಚೋಮನದುಡಿಯನ್ನು ಪ್ರಸ್ತಾಪಿಸಿದ್ದೇನೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಸಾಹಿತ್ಯಗಳನ್ನು ವಿವಿಧ ಕಾಲಘಟ್ಟಗಳಾಗಿ ಗುರ್ತಿಸುತ್ತೇವೆ. ಈ

ನೆಲೆಯಲ್ಲಿ ನವೋದಯ, ಪ್ರಗತಿಶೀಲ, ನವ್ಯಗಳು ಸಾಹಿತ್ಯ ದೃಷ್ಟಿಯಿಂದ ಮಾತ್ರವೇ ಮುಖ್ಯವಾದರೆ, ದಲಿತ–ಬಂಡಾಯ ಸಾಹಿತ್ಯವು ಭಾಷೆ, ಸಾಂಸ್ಕೃತಿಕ, ಸಾಮಾಜಿಕ ಚಳವಳಿಗಳನ್ನೂ ತನ್ನೊಡನೆ ಬೆಳಸಿಕೊಳ್ಳುತ್ತಾ ಬಂದಿದೆ. ದಲಿತ ಸಾಹಿತ್ಯವು ಈ ನೆಲೆಯಿಂದ ಒಂದು ಕ್ರಾಂತಿಯೆಂದೇ ಹೇಳಬೇಕು. ಇದು ಕಲೆ ಮತ್ತು ಪ್ರತಿಭಟನೆಯ ಮೂಲಕ ವ್ಯಕ್ತವಾಗಿದೆ. ಇದನ್ನು ನರೇಂದ್ರ ಮೋಹನರು ಸರಿಯಾಗಿ ಗ್ರಹಿಸಿರುವಂತೆ "ಕಲೆ ಮತ್ತು ಪ್ರತಿಭಟನೆಯು ಸಾಂಸ್ಕೃತಿಕ ಆಶೋತ್ತರಗಳೊಡನೆ ಅಥವಾ ಸಾಂಸ್ಕೃತಿಕ ಕ್ರಾಂತಿಯೊಡನೆ ಸೂಕ್ಷ್ಮಸಂಬಂಧ ಹೊಂದಿದೆ. ಸಾಂಸ್ಕೃತಿಕ ಕ್ರಾಂತಿಯು ರಾಜಕೀಯ ಪ್ರಜ್ಞೆಯ ಫಲವಾಗಿರುವಂತೆ ಸಮಾಜದ ಆಶೋತ್ತರಗಳ ಪ್ರತಿಭಟನೆಯೂ ಹೌದು"[4] ಎನ್ನುತ್ತಾರೆ. ಈ ಹಿನ್ನೆಲೆಯಲ್ಲಿ 70ರ ದಶಕದಲ್ಲಿ ಕರ್ನಾಟಕದ ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯವೂ ಕೂಡ ಇದೇ ನೆಲೆಯಲ್ಲಿತ್ತು. ಇದರ ಕುರಿತು ನೋಡುವುದಾದರೆ ಬಿ. ಬಸವಲಿಂಗಪ್ಪನವರ 'ಬೂಸಾ' ಪ್ರಕರಣ, ಭೂ ಮಸೂದೆ ಕಾಯ್ದೆಗಳಿಂದ ಭೂಮಿಯ ಸಂಬಂಧದಲ್ಲಾದ ಬದಲಾವಣೆಗಳು, ದಲಿತ ಸಂಘರ್ಷ ಸಮಿತಿಯ ಹುಟ್ಟು, ಅಂಬೇಡ್ಕರ್ ವಾದ, ಮಾರ್ಕ್ಸ್ ವಾದ, ಲೋಹಿಯಾವಾದದ ಪ್ರಭಾವಗಳು, ಮೊದಲ ತಲೆಮಾರಿನವರು ತಾವು ಕಲಿತ ಶಿಕ್ಷಣದ ಪ್ರಭಾವದಿಂದ ತಮ್ಮ ಕಾವ್ಯಗಳನ್ನು ರಚಿಸಿದ್ದು, ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್, ಆಂಧ್ರದ ದಿಗಂಬರ ಕಾವ್ಯ, ಹಿಂದಿಯ ಜನವಾದೀ ಸಾಹಿತ್ಯ, ಆಫ್ರಿಕಾದ ಕಪ್ಪು ಕಾವ್ಯ, ರೈತಚಳುವಳಿಗಳು ಬಹುಮುಖ್ಯವಾಗಿ ಆ ಕಾಲಘಟ್ಟದ ಕ್ರಾಂತಿಗೆ ವೇದಿಕೆಯಾಗಿ ಮಾರ್ಪಟ್ಟವು. ಆ ಕ್ರಾಂತಿಗೆ ಮುಖ್ಯಭೂಮಿಕೆಯಾಗಿ ದಲಿತ ಸಂಘರ್ಷ ಸಮಿತಿ ತನ್ನ ಕಾರ್ಯನಿರ್ವಹಿಲು ಪ್ರಧಾನ ಪಾತ್ರವಹಿಸಿತು. ದಲಿತ ಸಂಘರ್ಷ ಸಮಿತಿ ಹುಟ್ಟಿನ ಕುರಿತು ಬಿ. ಕೃಷ್ಣಪ್ಪನವರ ನಿಲುವು ಇದು "ಶತಮಾನಗಳಿಂದ ಈ ದೇಶದಲ್ಲಿ ನಡೆದು ಬಂದಿರುವ ವರ್ಣಬೇಧ, ಆರ್ಥಿಕ ಅಸಮಾನತೆ, ಮತ್ತು ಮೇಲ್ವರ್ಗದನ್ಯಾಯ ತತ್ವದಿಂದಾಗಿ ನಿಷ್ಕ್ರಿಯಗೊಂಡು ಚಲನ ರಹಿತವಾಗಿರುವ ಪ್ರಜಾಪ್ರಭುತ್ವಯಂತ್ರ ಇವು ಮೂಲಭೂತ ಕಾರಣಗಳೆಂಬುದು ಸ್ಪಷ್ಟ. ಒಂದು ಪಕ್ಷ ಈ ದೇಶದಲ್ಲಿ ಆರ್ಥಿಕ ಅಸಮಾನತೆ ಮತ್ತು ಜಾತಿ ಅಸಮಾನತೆಗಳ ವಿರುದ್ಧ ಯುದ್ಧ ಸಾರಿರುವ ಕಮ್ಯೂನಿಸ್ಟ್ ಮತ್ತು ಸೋಶಿಯಲಿಸ್ಟ್ ಚಳುವಳಿಗಳು ಯಶಸ್ವಿಯಾಗಿ ಬಡಜನತೆಯನ್ನು ತಲುಪಿದ್ದರೆ ದಲಿತ ಸಂಘರ್ಷ ಸಮಿತಿ ಹುಟ್ಟುತ್ತಲೇ ಇರಲಿಲ್ಲ"[5] ಎನ್ನುತ್ತಾರೆ. ಅದುವರೆಗೂ ಜನತೆಯ ಹೆಸರಿನಲ್ಲಿ ಪ್ರಭುತ್ವ ಮತ್ತು ಸರ್ಕಾರಗಳು ಇವುಗಳ ಬಗ್ಗೆ ಎಷ್ಟು ಕಿವುಡಾಗಿದ್ದವು ಎಂಬುದನ್ನು ಇಲ್ಲಿ ಗ್ರಹಿಸಬಹುದು.

ಇಂತಹುದೇ ಸಾಂಸ್ಕೃತಿಕ ಸಮಸ್ಯೆಯೊಂದು ಸಾಹಿತ್ಯದಲ್ಲೂ ಜಡ್ಡುಗಟ್ಟಿತ್ತು. ಪರಂಪರೆಯಿಂದಲೂ ಸಂಸ್ಕೃತ ಸಾಹಿತ್ಯ ಕಟ್ಟಿಕೊಟ್ಟ ಭಾರತೀಯ ಕಾವ್ಯಮೀಮಾಂಸೆಯನ್ನೇ ಪರಿಪಾಲಿಸುತ್ತಾ, ಭಾಷಿಕ ಮಡಿವಂತಿಕೆಯನ್ನೂ ಸೃಷ್ಟಿಸಿತ್ತು. ನವೋದಯ, ಪ್ರಗತಿಶೀಲ, ನವ್ಯ ಈ ಮೂರು ಸಾಹಿತ್ಯಿಕ ಕಾಲಘಟ್ಟಗಳು ಈ ನೆಲದ ಬೆವರಿನ ವಾಸನೆಗೆ ಅಕ್ಷರಗಳಾಗದೆ ಸಂಸ್ಕೃತದ, ವಿದೇಶೀಯ ಸರಕುಗಳನ್ನೇ ಸಾಹಿತ್ಯವಾಗಿ ಭೋದಿಸುತ್ತಾ, ವಿಮರ್ಶಿಸುತ್ತಾ ಇದ್ದರು. ಇಂತಹ ಸಂದರ್ಭದಲ್ಲಿ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಅಬಚೂರಿನ ಪೋಸ್ಟಾಫೀಸು ಮುನ್ನುಡಿಯಲ್ಲಿ ಮಹತ್ವದ ಹೇಳಿಕೆಯನ್ನು ನೀಡಿದರು "ಕನ್ನಡದ ನವ್ಯ ಸಂಪ್ರದಾಯವನ್ನು ಸಂಪೂರ್ಣವಾಗಿ ತೊರೆದು ಹೊಸದಿಕ್ಕಿನಲ್ಲಿ ನಾವೀಗ ಅನ್ವೇಷಿಸಬೇಕಾಗಿದೆ, ಕಳೆದ ಹದಿನೈದು ಇಪ್ಪತ್ತು ವರ್ಷಗಳಲ್ಲಿ ನವ್ಯಸಾಹಿತಿಗಳು ಪ್ರಾಮಾಣಿಕತೆ ಹೆಸರಿನಲ್ಲಿ ಅಭ್ಯಸಿಸಿದ ಅಪ್ರಮಾಣಿಕತೆ, ವಿಮರ್ಶೆಯ ಹೆಸರಿನಲ್ಲಿ ನಡೆಸಿದ ರಾಜಕೀಯ, ಅನುಭವ ಕ್ಷೇತ್ರವನ್ನು ವಿಸ್ತರಿಸುವ ಹೆಸರಿನಲ್ಲಿ ಅಭಿವ್ಯಕ್ತಿ ಸಾಮರ್ಥ್ಯವನ್ನು ಕುಗ್ಗಿಸಿದುದು ಇತ್ಯಾದಿಗಳೆಲ್ಲಾ ಆ ಮಾರ್ಗದ ಬರಹಗಾರರಿಗೆ ಹಿಡಿದ ಶನಿಗಳಾಗಿವೆ. ನವ್ಯ ಸಾಹಿತ್ಯ ನಿಸ್ತೇಜಗೊಂಡಿದೆ ಎಂದ ಅವರು ಇದಕ್ಕೆ ಮೂರು ಕಾರಣಗಳನ್ನು ನೀಡುತ್ತಾರೆ. ಮೊದಲನೆಯದು ಯಾಂತ್ರಿಕವಾಗಿರುವ ಅದರ ಶೈಲಿ, ತಂತ್ರಗಳು. ಎರಡನೆಯದು ಕೇವಲ ಉಪಾಧ್ಯಾಯರೇ ಹೆಚ್ಚಾಗಿರುವ ಅದರ ಸಾಹಿತಿವರ್ಗ. ಮೂರನೆಯದು ಕೇವಲ ಸಾಹಿತ್ಯಕ್ಕೆ ಸೀಮಿತಗೊಂಡ ಅದರ ಕ್ರಾಂತಿಕಾರಕ ತನ"[6] ಎನ್ನುತ್ತಾರೆ. ತೇಜಸ್ವಿಯವರು ಇದು ಭಾಷಿಕ ನೆಲೆಯಲ್ಲೂ ಆಗಬೇಕಾದ ಅಗತ್ಯವನ್ನು ಸೂಚಿಸುತ್ತಾರೆ. ಈ ಹಿನ್ನೆಲೆಯಲ್ಲಿ ಭಾಷೆಯ ಬಗ್ಗೆ ನವೋದಯ, ನವ್ಯ ಸಾಹಿತ್ಯದ ಭಾಷೆಗೂ ದಲಿತ ಸಾಹಿತ್ಯದ ಭಾಷೆಗೂ ಇರುವ ವ್ಯತ್ಯಾಸವನ್ನು ಡಾ. ಬಸವರಾಜ ಕಲ್ಗುಡಿ ಸೂಕ್ಷ್ಮವಾಗಿ ವಿವರಿಸುತ್ತಾರೆ. "ಕನ್ನಡದ ನವೋದಯಕ್ಕಾಗಲಿ, ನವ್ಯಕ್ಕಾಗಲಿ ಭಾಷೆಯೆನ್ನುವುದು ವರ್ತಮಾನದ ಕ್ಷಣವನ್ನು ಹಿಡಿಯುವ ಸತ್ಯದ ಹಾಗೂ ಸಧ್ಯದ ಭಾಷೆಯಾಗಿತ್ತು. ಆ ಭಾಷೆಗೆ ಸತ್ಯವೆನ್ನುವುದು ಕ್ಷಣದ ಸತ್ಯವಾಗಿತ್ತು. ಆಗ ಭಾವಗೀತೆಗಳು ಅತ್ಯಂತ ಪ್ರಧಾನವಾಗಿ ಮುಂದೆ ಬಂದಂಥ ಕಾವ್ಯಪ್ರಕಾರ. ಇಂಥ ಸತ್ಯದ ಕ್ಷಣವನ್ನು ಬಹಳ ಪರಿಣಾಮಕಾರಿಯಾಗಿ ಹಿಡಿದಿಟ್ಟ ಕಾಲ ಅದು. ಆದರೆ ದಲಿತ ಭಾಷೆ ವರ್ತಮಾನದ, ಅಂದರೆ ಈ ಕ್ಷಣದ ಸತ್ಯದ ಕಲ್ಪನೆಯನ್ನೇ ಸಂಪೂರ್ಣವಾಗಿ ನಿರಾಕರಿಸಿತು ಎನ್ನುವುದು ಆ ಭಾಷೆಗೆ ಒಂದು ದೊಡ್ಡ ಚೈತನ್ಯವನ್ನು ಒದಗಿಸಿತು. ಕಾಲದ ಪರಿಕಲ್ಪನೆಯನ್ನು ಅದು ಶತಮಾನಗಳ ಸತ್ಯಾಸತ್ಯತೆಗಳ ಸತ್ಯವನ್ನಾಗಿ ಮಾರ್ಪಡಿಸಿಕೊಂಡಿತು. ಹೀಗಾಗಿ ಕನ್ನಡ ಸಾಹಿತ್ಯಕ್ಕೆ ಒಂದು ಪ್ರಜ್ವಲವಾದ ಭಾಷೆಯನ್ನು ದಲಿತ ಭಾಷೆ

ಸೃಜನಶೀಲವಾಗಿ ಕೊಟ್ಟಿತು. ಕನ್ನಡ ತಿಳುವಳಿಕೆಗೆ ಅದರಿಂದ ಒಂದು ಮಿಂಚು ಬಂದಿದೆ. ದಲಿತ ಭಾಷೆಗೆ ಕನ್ನಡ ಪರಂಪರೆಯಲ್ಲಿ, ಬದುಕಿನಲ್ಲೇ ಅರಿವಿನ ಉಜ್ವಲತೆಯ ದೀಪವನ್ನು ಆರದಂತೆ ನೋಡಿಕೊಳ್ಳುವ ಚೈತನ್ಯವಿದೆ. ತನ್ನ ಎದುರಿಗೆ ಇರುವ ಸಾಂಪ್ರದಾಯಿಕತೆಯನ್ನು ಅದು ಧೀಮಂತಿಕೆಯಿಂದ ಎದುರಿಸಿದೆ. ಈ ಭಾಷೆಯನ್ನು ಬಳಸಿದ ಸಮುದಾಯ ಶ್ರೇಣೀಕರಣಗೊಂಡ ಸ್ವರೂಪವನ್ನು ಪ್ರಶ್ನಿಸಿದ ಸಮುದಾಯ”[7] ಎನ್ನುತ್ತಾರೆ. ಯಾವುದೇ ಒಂದು ಸಮುದಾಯ ಭಾಷೆಯನ್ನು ಬಳಸುತ್ತಿದೆ ಎಂದರೆ ಅದು ಅದರ ಸಂಸ್ಕೃತಿ, ವೈಶಿಷ್ಟ್ಯತೆ, ಬದುಕಿನ ಕ್ರಮದೊಂದಿಗೆ ಸಂಬಂಧವನ್ನು ಹೊಂದಿರುತ್ತದೆ. ಇದೇ ನೆಲೆಯಲ್ಲಿಯೇ ದಲಿತ–ಬಂಡಾಯ ಸಾಹಿತ್ಯದ ಆರಂಭದ ಕಾವ್ಯಗಳು ಕೂಡ ತಮ್ಮ ಅದುವರೆಗಿನ ಶೋಷಣೆಯ, ಹಸಿವಿನ, ಸಿಟ್ಟಿನ, ಪ್ರತಿಭಟನೆಯ ಸ್ವರೂಪದ ಭಾಷೆಯನ್ನು ಬಳಸಿರುವುದನ್ನು ಕಾಣುತ್ತೇವೆ. ದಲಿತ ಸಾಹಿತ್ಯ, ದಲಿತ ಭಾಷೆ ಎಂಬುದರಲ್ಲಿಯೂ ಕೂಡ ಅನೇಕ ಒಳನುಡಿಗಳನ್ನು ಕಾಣುತ್ತೇವೆ. ಈ ಒಳನುಡಿಗಳು ಅಲ್ಲಿನ ಸಮುದಾಯದ ಸಾಂಸ್ಕೃತಿಕ ಪ್ರತೀಕವೂ, ಬದುಕಿನ ವಿಶಿಷ್ಟತೆಯೂ ಆಗಿರುತ್ತವೆ. ಬಸವಲಿಂಗಪ್ಪನವರು ಬಳಸಿದ 'ಬೂಸಾ' ಎಂಬ ಪದ ಅದುವರೆಗೆ ಬಳಸಿದ್ದ ಸಾಹಿತ್ಯ ಮೀಮಾಂಸೆಯನ್ನು, ನುಡಿ ಸ್ವರೂಪವನ್ನೇ ಬದಲಾಯಿಸಿತು. ಇಂತಹ ನುಡಿಸ್ವರೂಪದ ಬದಲಾವಣೆಯಲ್ಲಿ ದಲಿತ ಸಾಹಿತ್ಯದ ಕೊಡುಗೆ ಅಪಾರವಾಗಿದೆ. ಈ ಬೂಸಾ ಪ್ರಕರಣ ದಲಿತ ಚಳುವಳಿ ಮತ್ತು ಸಾಹಿತ್ಯಕ್ಕೆ ಮುನ್ನುಡಿಯ ಸ್ವರೂಪದ್ದು ಹಾಗಾಗಿ ಇದನ್ನು ವಿಶ್ಲೇಷಿಸುವುದು ಅಗತ್ಯ. ಬಸವಲಿಂಗಪ್ಪನವರು ನವೆಂಬರ್ 20, 1973ರಲ್ಲಿ ಮೈಸೂರು ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ 'ಹೊಸ ಅಲೆ' ಎನ್ನುವ ವಿಷಯ ಕುರಿತ ಭಾಷಣದ ಸಂದರ್ಭದಲ್ಲಿ 'ಬೂಸಾ' ಪದ ಬಳಕೆ ಮಾಡಿದರು. ಕನ್ನಡ ಕನ್ನಡ ಎಂದು ಕೂಗಾಡುತ್ತಿದ್ದ ದಲಿತ ವಿದ್ಯಾರ್ಥಿಗಳನ್ನು ಕುರಿತು ಬಸವಲಿಂಗಪ್ಪನವರು "ಏನ್ ಕನ್ನಡ ಕನ್ನಡ ಅಂತ ಕೂಗಾಡ್ತಿದ್ದೀರಲ್ಲ ಕನ್ನಡ ಸಾಹಿತ್ಯದಲ್ಲಿ ಏನಿದೆ? ಅಲ್ಲಿ ನಿಮ್ಮ ದುಃಖ ದುಮ್ಮಾನ ಇದೆಯಾ? ನಿಮ್ಮ ಬದುಕಿನ ಚಿತ್ರಣವಿದೆಯಾ? ಅಲ್ಲಿರುವುದೆಲ್ಲಾ ಬೂಸಾ ಸಾಹಿತ್ಯ"[8] ಎನ್ನುತ್ತಾರೆ. ಇದನ್ನು ಕುವೆಂಪು ಮತ್ತು ಯು. ಆರ್. ಅನಂತಮೂರ್ತಿರವರು ಕೂಡ ಸಮರ್ಥಿಸುತ್ತಾರೆ. ಕುವೆಂಪುರವರ ಪ್ರತಿಕ್ರಿಯೆ ಎಂದರೆ "ಈಗ ಬಸವಲಿಂಗಪ್ಪನವರು ಯಾವ ದೃಷ್ಟಿಯಿಂದ ಹಾಗೆ ಹೇಳಿದರು ಎಂದು ವಿಚಾರಮಾಡಿ, ಹರಿಜನರ ಉದ್ಧಾರವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಗೆ ಹೇಳಿದರು. ಈ ದೃಷ್ಟಿಯಿಂದ ಹೇಳತಕ್ಕಂತಹ ಸಾಹಿತ್ಯ ಕನ್ನಡದಲ್ಲಿ ಹೆಚ್ಚಿಲ್ಲ, ಆದ್ಧ–ರಿಂದ ಬೂಸಾ ಸಾಹಿತ್ಯ ಎಂದರು. ಕನ್ನಡದಲ್ಲೂ ಹರಿಜನೋದ್ಧಾರ ದೃಷ್ಟಿಯಿಂದಲೂ ಬೂಸಾ ಸಾಹಿತ್ಯವಲ್ಲದ ಸಾಹಿತ್ಯ ಸ್ವಲ್ಪ ಹುಟ್ಟಿದೆ ಎನ್ನುತ್ತಾರೆ."[9] ಹಾಗೆಯೇ

ಅನಂತಮೂರ್ತಿರವರು ಕೂಡ ಇದೇ ನೆಲೆಯಲ್ಲಿ ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ. "ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು ಬೂಸಾ ಎಂದು ಕರೆದಾಗ ಹಾಗೇಕೆ ಕರೆದರೆಂಬ ಪ್ರಶ್ನೆಯನ್ನು ನಮಗೆ ನಾವು ಕೇಳಿಕೊಳ್ಳಬೇಕು. ನಮ್ಮ ಮತಧರ್ಮಗಳಿಂದ ಮೊದಲಿನಿಂದಲೂ ವಂಚಿತರಾಗಿ ಹೊರಗುಳಿದ ಪಂಚಮರಿಗೆ ಮತೀಯ ಸಾಹಿತ್ಯದಿಂದ ಕೂಡಿರುವ ಕನ್ನಡ ಸಾಹಿತ್ಯ ಅರ್ಥಹೀನವಾಗಿ ಕಂಡರೆ ಅದರಲ್ಲೇನು ಆಶ್ಚರ್ಯವಿದೆ? ಅಲ್ಲದೆ ಪಂಚಮರು ಕನ್ನಡ ಸಾಹಿತ್ಯದ ಇಂಥ ಮತೀಯ ಪರಂಪರೆಯನ್ನು ಉದ್ವಿಗ್ನತೆಯಲ್ಲಿ ತ್ಯಜಿಸಿದಾಗ ಮಹಾರಾಷ್ಟದ ಮಹರ್ ಜನಾಂಗದ ಲೇಖಕರಂತೆ (ದಲಿತ ಪ್ಯಾಂಥರ್ಸ್) ಇವರೂ ಕನ್ನಡಕ್ಕೆ ನಿಜವಾಗಿಯೂ ಹೊಸದಾದದ್ದನ್ನು ಸೇರಿಸುವ ಸಾಧ್ಯತೆಯಿಲ್ಲವೇ? ಆದರೆ ಪಂಚಮರು ಕನ್ನಡ ಸಾಹಿತ್ಯದ ಬಗ್ಗೆ ತಾಳಬಹುದಾದ ಈ ಧೋರಣೆ ಕನ್ನಡ ಭಾಷೆಗೆ ಅನ್ವಯಿಸುವುದಿಲ್ಲ. ಬಸವಲಿಂಗಪ್ಪನವರು ಪಂಚಮರನ್ನು ಸಂಘಟಿಸಿ ಹೋರಾಟಕ್ಕೆ ಇಳಿಸಬೇಕಾದರೆ ಕನ್ನಡದಿಂದಲೇ ಸಾಧ್ಯ– ಅಂದರೆ ಪ್ರಜಾಪ್ರಭುತ್ವದ ಹೋರಾಟಕ್ಕೆ ಪ್ರಜಾಭಾಷೆ ಅಗತ್ಯ ಆಯುಧ"[10] ಎನ್ನುತ್ತಾರೆ. ಇಲ್ಲಿ ಗಮನಿಸಬಹುದಾದ ಎರಡು ಮುಖ್ಯ ಅಂಶಗಳಿವೆ ಒಂದು ಇದುವರೆಗೂ ಸಾಹಿತ್ಯದಲ್ಲಿ ದಲಿತರ ಬಗೆಗೆ ಯಾವುದೇ ಚಿತ್ರಣಗಳಿಲ್ಲ, ಹಾಗಿದ್ದರೂ ಅದು ಅಲ್ಪ ಮಾತ್ರದ್ದು ಎಂದು ಕುವೆಂಪು ಮತ್ತು ಅನಂತಮೂರ್ತಿ ಇಬ್ಬರೂ ಒಪ್ಪುತ್ತಾರೆ. ಅದು ದಲಿತ–ಬಂಡಾಯ ಸಾಹಿತ್ಯದಲ್ಲಿ ವ್ಯಕ್ತವಾಗಿದೆ. ಅನಂತಮೂರ್ತಿಯವರು ಹೇಳುವಂತೆ ದಲಿತರು ಮತ್ತು ಶೋಷಿತ ವರ್ಗ ಕನ್ನಡ ಸಾಹಿತ್ಯಕ್ಕೆ ಹೊಸರೂಪವನ್ನು ಕೊಡಬಲ್ಲರು. ಅದಕ್ಕೆ ಕನ್ನಡ ಭಾಷೆಯನ್ನು ಮುಖ್ಯವಾಗಿ ಬಳಸಬೇಕು. ಏಕೆಂದರೆ ಕನ್ನಡ ಭಾಷೆಯ ಹೊರತಾಗಿ ದಲಿತರು ಒಗ್ಗೂಡಲು ಸಾಧ್ಯವಿಲ್ಲ ಎನ್ನುತ್ತಾರೆ. ಈ ಭಾಷಾ ಬಳಕೆಯು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಹೊಸರೀತಿಯ ಕಸುವು, ಶೈಲಿಯನ್ನೂ, ಚಲನಶೀಲತೆಯನ್ನು ತುಂಬುತ್ತದೆ. ಇದು ಕನ್ನಡ ಭಾಷೆಗೆ ವರದಾನವೆಂದೇ ಹೇಳುತ್ತಾರೆ. ಪ್ರಜಾರಾಜ್ಯಕ್ಕೆ ಪ್ರಜಾ ಭಾಷೆಯು ಹೇಗೆ ಅಗತ್ಯ ಆಯುಧವೋ ದಲಿತರ, ಶೋಷಿತರ ಅಸಹಾಯಕತೆಯ ಒಗ್ಗೂಡುವಿಕೆಗೆ ಅವರದೇ ಆದ ಭಾಷಾ ಬಳಕೆಯ ಅಗತ್ಯವನ್ನು ದಲಿತ ಸಾಹಿತ್ಯ ಬಳಸಿತು.

ಈ ದೃಷ್ಟಿಯಿಂದ ಭಾಷೆಯು ಮಡಿವಂತಿಕೆಯಾಗಬಾರದು ಹಾಗೆ ಮಡಿವಂತಿಕೆಗೆ ಒಳಗಾದರೆ ಅದು ಜನಸಾಮಾನ್ಯರನ್ನು ತಲುಪುವುದಿಲ್ಲ, ಎಂಬುದನ್ನು ಅರಿತು ದಲಿತ ಚಳುವಳಿಗಾರರು ಮತ್ತು ಸಾಹಿತಿಗಳು ತಮ್ಮದೇ ಶೈಲಿಯ ಭಾಷೆಯನ್ನು ಬಳಸಿದರು. ಆದರೂ ಭಾಷೆಯನ್ನು ಪ್ರಮಾಣಬದ್ಧವಾಗಿಸಿ,

ಮಡಿವಂತಿಕೆಯನ್ನು ಉಳಿಸುವ ಪ್ರಯತ್ನಗಳನ್ನು ಮೇಲ್ವರ್ಗದ, ಮೇಲ್ಜಾತಿಯವರು ಅನುಸರಿಸಿದರು. ಅದಕ್ಕೆ ಒಂದೆರಡು ಉದಾಹರಣೆಗಳನ್ನು ನೋಡಬಹುದು. ಬಿ. ಬಸವಲಿಂಗಪ್ಪನವರು "ಈ ಹೇಲು–ಉಚ್ಚೆ ಹೊರುವಂಥಹುದನ್ನು ನಾನು ನಿಲ್ಲಿಸಿದೆ. ಪತ್ರಿಕೆಗಳಲ್ಲೆಲ್ಲಾ ಮಲ–ಮೂತ್ರ ಹೊರುವುದನ್ನು ನಿಲ್ಲಿಸಲು ಬಸವಲಿಂಗಪ್ಪ ಪ್ರಯತ್ನ ಮಾಡುತ್ತಿದ್ದಾನೆ ಎಂದು ಬರದರೇ ಹೊರತು ಹೇಲು–ಉಚ್ಚೆ ಅಂತ ಒಬ್ಬರೂ ಬರೆಯಲಿಲ್ಲ"[11] ಎನ್ನುತ್ತಾರೆ. ಅಂದರೆ ಹೇಲು–ಉಚ್ಚೆ ಎಂಬ ಪದಗಳೇ ಕೇಳುಗರಿಗೆ ಇರುಸು–ಮುರುಸು ಉಂಟುಮಾಡುತ್ತದೆಂದರೆ, ಅದೇ ಕೆಲಸವನ್ನು ಮಾಡುತ್ತಿರುವ ಮನುಷ್ಯ ಸಮುದಾಯ ಯಾವ ರೀತಿಯ ಮನಸ್ಥಿತಿಯನ್ನು ಹೊಂದಿರಬೇಕು? ಹೇಲು–ಉಚ್ಚೆ ಹೊರುವವನ ಬದುಕು, ಅವನ ಭಾಷೆಯ ಬಗ್ಗೆ ಇನ್ನೆಷ್ಟು ತಾತ್ಸಾರ ಹೊಂದಿರಬೇಕು ಎಂಬುದನ್ನು ನಾವು ಯೋಚಿಸಬೇಕಿದೆ. ಇಂತಹ ವ್ಯವಸ್ಥೆಯ ವಿರುದ್ಧ ಹುಟ್ಟುವುದು ಕ್ರಾಂತಿಗೀತೆಗಳು. ಕವಿ ಕುವೆಂಪುರವರ ಎದುರಲ್ಲೇ ಅವರ ಕ್ರಾಂತಿಗೀತೆಗಳನ್ನು ಸುಗಮ ಸಂಗೀತದಂತೆ ರಾಗವಾಗಿ ಹಾಡಿದಾಗ ಕುವೆಂಪು ಇವು ಹೋರಾಟದ ಕ್ರಾಂತಿಗೀತೆಗಳು ಇವುಗಳನ್ನು ಏರುಸ್ವರದಲ್ಲಿಯೇ ಗಟ್ಟಿಯಾಗಿ ಹಾಡಬೇಕೇ ಹೊರತು ಸಂಗೀತದ ಲಯ, ತಾಳ, ಛಂದಸ್ಸಿಗೆ ತಕ್ಕಂತೆ ಹಾಡುವುದಲ್ಲ ಎಂದಿದ್ದನ್ನೂ ಈ ಸಮಯದಲ್ಲಿ ನೆನೆಯಬಹುದು. ಇಲ್ಲಿ ಭಾಷೆಯ ಬಳಕೆ ಬರವಣಿಗೆ ಮತ್ತು ಹಾಡುಗಾರಿಕೆ ಎರಡೂ ಸ್ವರೂಪದಲ್ಲಿ, ಶೈಲಿಯಲ್ಲಿ ಬದಲಾಗುತ್ತದೆ. ಇದನ್ನು 'ಕ್ರಾಂತಿ' ಎಂದು ಕರೆಯಬಹುದು. ಕ್ರಾಂತಿಯ ಕುರಿತು ಡಿ. ಆರ್. ನಾಗರಾಜರು ಹೀಗೆ ಅಭಿಪ್ರಾಯ ಪಡುತ್ತಾರೆ. "ಕ್ರಾಂತಿಯ ಕಲ್ಪನೆ ಮತ್ತು ಕಾವ್ಯ ಕೃತಿಯ ಕಲ್ಪನೆ ಕನ್ನಡ ಪರಂಪರೆಯಲ್ಲಿ ಒಟ್ಟೊಟ್ಟಿಗೇ ಹೋಗುತ್ತದೆ. 'ಕ್ರಾಂತಿ' ಎಂದರೆ ಸಾಮಾನ್ಯ ಜನ ಸಿಡಿದೇಳುವ ಕ್ರಿಯೆ, ಅದೊಂದು ದಂಗೆ. ಜನ ಸಿಟ್ಟಿನಿಂದ ಒಮ್ಮೆಗೇ ಸ್ಫೋಟಿಸುವ ಜ್ವಾಲಾಮುಖೀ ಕ್ರಿಯೆ. ಕ್ರಾಂತಿಯ ಈ ಸರಳ ಕಲ್ಪನೆಗೆ ಅನುಗುಣವಾಗಿಯೇ ಕಾವ್ಯವೂ ಇರುತ್ತದೆ. ಹೀಗಾಗಿ ಕ್ರಾಂತಿ ಕಾವ್ಯ ಎಂದರೆ ಕನ್ನಡದಲ್ಲಿ ಹಾಡುಗಬ್ಬ ಅಥವಾ ಹಾಡಿನ ಲಯಗಳಿಗೆ ಹತ್ತಿರವಿರುವಂಥದು. ಕನ್ನಡದ ಲಯ ಶರೀರದಲ್ಲಿ ಕ್ರಾಂತಿ ಮಿಡಿಯುವುದೇ ಹಾಡಿನಲ್ಲಿ"[12] ಎನ್ನುತ್ತಾರೆ. ಹಾಗಾಗಿ ದಲಿತ ಸಾಹಿತ್ಯದ ಆರಂಭದ ಕಾವ್ಯಗಳು ಕ್ರಾಂತಿಯ ಪ್ರತೀಕವಾಗಿಯೇ ಹುಟ್ಟಿದವು. ಅದು ಭಾಷೆಯ ಸ್ವರೂಪದಲ್ಲಿ, ಸಾಮಾಜಿಕ ಸಂದರ್ಭದಲ್ಲಿ, ಸಂಸ್ಕೃತಿ ಎಲ್ಲದಕ್ಕೂ ಸೇರಿಸಿಯೇ ಬಳಕೆಯಾಯಿತು. ದಲಿತ ಸಾಹಿತ್ಯದ ಆರಂಭದ ಕಾವ್ಯದಲ್ಲಿ ಬಳಕೆಯಾದ ಭಾಷೆಯ ಸ್ವರೂಪದ ಬಗ್ಗೆ ಪ್ರತಿಯೊಬ್ಬ ವಿಮರ್ಶಕರೂ ಹೇಳುವ ಸಾಮಾನ್ಯದ ಲಕ್ಷಣಗಳೆಂದರೆ 'ಸಿಟ್ಟು, ಆಕ್ರೋಶ, ರೊಚ್ಚು, ಹಸಿವು, ಪ್ರತಿಭಟನೆ, ಹೇಳಿಕೆಗಳು, ಘೋಷಣೆಗಳು, ಕ್ರಾಂತಿಪದಗಳು' ಎನ್ನುತ್ತಾ ಅದೊಂದು ಪರಂಪರಾಗತವಾಗಿ

ಶೋಷಣೆ, ದಬ್ಬಾಳಿಕೆಗೆ ಒಳಗಾದವರ ಭಿನ್ನ ಧ್ವನಿ ಎನ್ನುತ್ತಲೇ, ಸಾಹಿತ್ಯದಿಂದ ಹೊರತಾದದ್ದು ಎನ್ನುವಂತೆಯೇ ಮಾತನಾಡುತ್ತಾರೆ. ಹೀಗೆ ಮಾತನಾಡುವವರನ್ನು ಕುರಿತು ದಲಿತ ಸಾಹಿತ್ಯದ ಮೂಲ ಪರಿಕಲ್ಪನೆಗಳಲ್ಲಿ ನಾಲ್ಕನ್ನು 'ಮ. ನ. ಜವರಯ್ಯ' ಸ್ಥೂಲವಾಗಿ ಹೀಗೆ ಪಟ್ಟಿ ಮಾಡುತ್ತಾರೆ. "1. ತಮ್ಮ ಮೇಲಿನ ಅನ್ಯಾಯಗಳಿಗೆ ಮೂಲವಾಗಿರುವ ಧಾರ್ಮಿಕ, ಸಾಮಾಜಿಕವೇ ಮೊದಲಾದ ಪಾರಂಪರಿಕ ಮೌಲ್ಯಗಳ ಯಥಾರ್ಥತೆಯನ್ನು ಪ್ರಶ್ನಿಸುವ, ಇಲ್ಲವೇ ನಿರುತ್ತರಿಗಳಾದ ಅವುಗಳನ್ನು ಅನಾದರಣೆಯಿಂದ ಕಂಡು ಪರಿಹಾಸ್ಯದಿಂದ ನೋಡುವ ಇಲ್ಲವೇ ಬರಹದಲ್ಲಿ ವಿಡಂಬಿಸುವುದನ್ನು ದಲಿತ ಸಾಹಿತ್ಯದಲ್ಲಿ ಕಾಣಬಹುದಾಗಿದೆ. 2. ಗ್ರಾಮೀಣ ವ್ಯವಸ್ಥೆಯ ತಮ್ಮ ದೈನಂದಿನ ಜೀವನದಲ್ಲಿನ ತಕ್ಷಣದ ವೈರಿಯಾದ ಜಮೀನ್ದಾರಿ ಪದ್ಧತಿ, ಅದರಿಂದ ಉಂಟಾಗಿರುವ ಆರ್ಥಿಕ ಅನ್ಯಾಯಗಳ ಪರಂಪರೆ ಹಾಗೂ ಆ ಪರಂಪರೆಯ ವಿರುದ್ಧ ಬಂಡೆದ್ದಿರುವ ಯುಗಧರ್ಮದ ಒಂದು ಅನಿವಾರ್ಯ ಬೆಳವಣಿಗೆಯನ್ನು ದಲಿತ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಅಂದರೆ, ಅದು ಎಷ್ಟರಮಟ್ಟಿಗೆ ಸಾಹಿತ್ಯದಲ್ಲಿ ಒಂದು ಕಲಾತ್ಮಕ ಅಭಿವ್ಯಕ್ತಿಯನ್ನು ಪಡೆದಿದೆ ಎನ್ನುವುದು ನಂತರದ ಪ್ರಶ್ನೆ. 3. ದಲಿತ– ಬಂಡಾಯದಂಥ ಸಿಟ್ಟು, ಆಕ್ರೋಶಗಳ ನಡುವೆಯೂ ಕಾಣಬಹುದಾಗಿರುವ ಪ್ರೇಮ, ಅನುರಾಗ ಮತ್ತು ಪ್ರಣಯವೇ ಮುಂತಾದ ಶೃಂಗಾರ ಭಾವಗಳು. 4. ದಲಿತರ ಸಾಮಾಜಿಕ ವ್ಯವಸ್ಥೆಯ ದೈನಂದಿನ ಜೀವನದ ಸಾಂಸ್ಕೃತಿಕ ನಂಬಿಕೆಗಳಂತಿರುವ ಜಾನಪದ ಹಾಡುಗಳ ಶೈಲಿ ಅಥವಾ ದಲಿತ ಬಂಡಾಯ ಕಾವ್ಯದಲ್ಲಿನ performance ಗುಣ."[13] ಎನ್ನುತ್ತಾರೆ. ಹೀಗಿದ್ದಾಗಲೂ ಕೂಡ ದಲಿತ ಕಾವ್ಯ ಎಂದರೆ "ಗಂಡು ಕಾವ್ಯ' 'ಭಂಡಕಾವ್ಯ' ವೆಂದು ಟೀಕಿಸುತ್ತಾರೆ. ಇಲ್ಲಿನ ಭಾಷೆಯ ಸೊಗಡನ್ನು ಗ್ರಾಮ್ಯವೆಂದೂ, ವ್ಯಾಚ್ಯವೆಂದೂ, ಉತ್ಪ್ರೇಕ್ಷೆವೆಂದೂ, ವ್ಯಂಗ್ಯವೆಂದೂ ಮುಂತಾದ ಗುಣಗಳನ್ನು ಆರೋಪಿಸುತ್ತಾರೆ. ಇದು ದಲಿತ ಬಂಡಾಯ ಸಾಹಿತ್ಯದ ಭಾಷೆಯ ಬಗೆಗಿನ ತಿರಸ್ಕಾರ ಎನ್ನುವಂತೆ ಕಾಣುತ್ತದೆ. ಸಿದ್ಧಲಿಂಗಯ್ಯನವರ ಕಾವ್ಯದ ಭಾಷೆಯ ಬಗ್ಗೆ ಮಾತನಾಡುತ್ತಾ ಡಿ. ಆರ್. ನಾಗರಾಜುರವರು "ಈ ಭಾಷೆ ಕವಿಯ ಶ್ರೀರಾಮಪುರದ ಸ್ಲಂ ವಾಸ್ತವ್ಯದಿಂದ, ಅದಕ್ಕೂ ಹಿಂದೆಹೋಗಿ ಮಾಗಡಿ ತಾಲ್ಲೂಕಿನ ಹಳ್ಳಿಗಳಿಂದ ಬಂದದ್ದು, ಅವೆರಡೂ ಬೆರೆತು ರೂಪಗೊಂಡದ್ದು"[14] ಎಂದು ಹೇಳುತ್ತಾರೆ. ಕವಿಯೊಬ್ಬನಿಗೆ ಇರಬೇಕಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜವಾಬ್ದಾರಿಯನ್ನು ಸಿದ್ಧಲಿಂಗಯ್ಯನವರು ತಮ್ಮ ಭಾಷೆಯ ಮೂಲಕ ನಿರ್ವಹಿಸುತ್ತಾರೆ. ಇದು ದೇವನೂರು, ಕುಂವೀ, ಇಂದೂಧರ ಹೊನ್ನಾಪುರ, ಮನಜ, ಅರವಿಂದ ಮಾಲಗತ್ತಿ, ಕೆ. ಬಿ. ಸಿದ್ಧಯ್ಯನವರ ಕಾವ್ಯದ ಮೂಲಕ ಭಾಷಿಕ ಮತ್ತು ಸಾಂಸ್ಕೃತಿಕವಾಗಿ ಮುಂದುವರೆಯುತ್ತದೆ.

ಭಾಷಿಕವಾಗಿ ದಲಿತ ಸಾಹಿತ್ಯವು ಯಾಕೆ ಅಷ್ಟು ಕ್ರಾಂತಿಕಾರಿ ನಿಲುವುಗಳನ್ನು ತೆಗೆದುಕೊಳ್ಳಬೇಕಾಗಿತ್ತು ಎಂಬುದನ್ನು ಅರವಿಂದ ಮಾಲಗತ್ತಿಯವರು ಹೀಗೆ ವಿವರಿಸುತ್ತಾರೆ. “ಹೊಸ ತಲೆಮಾರಿನ ದಲಿತರು ತಮ್ಮದಲ್ಲದ ಬದುಕಿನ ಭಾಷೆಯಲ್ಲಿ ಶಿಕ್ಷಣವನ್ನು ಪಡೆದಿರುವುದು, ತನ್ನ ಸ್ವಂತ ಭಾಷೆಯನ್ನೇ ‘ಗಮಾರ ಭಾಷೆ’ ಎಂದು ನಿರಾಕರಿಸಿದ್ದು. ಮಡಿವಂತಿಕೆಯ ಗ್ರಂಥಸ್ಥ ಭಾಷೆಯನ್ನು ಶ್ರೇಷ್ಠವೆಂದು ಭ್ರಮಿಸಿದ್ದು”[15] ಮುಖ್ಯವಾದವು. ಇವುಗಳಲ್ಲಿ ತನ್ನದೇ ಸಮುದಾಯದ ಅನಕ್ಷರಸ್ಥರಿಗೆ ತಮ್ಮ ಸ್ಥಿತಿಯನ್ನು ವಿವರಿಸುವ, ತಮ್ಮನ್ನು ನಿರಾಕರಿಸುತ್ತಿರುವವರಿಗೆ ಪ್ರತಿಭಟನೆಯ ಮೂಲಕ ಪ್ರಶ್ನಿಸುವ ಮತ್ತು ಉತ್ತರಿಸುವ ಕಾರ್ಯಗಳನ್ನು ಈ ಕಾಲದ ಸಾಹಿತಿಗಳು ನಿರ್ವಹಿಸಬೇಕಾಗಿತ್ತು. ಅದಕ್ಕಾಗಿ ಈ ರೀತಿಯ ಭಾಷೆಯನ್ನು ಆಯ್ದುಕೊಳ್ಳಬೇಕಾದ ಅಗತ್ಯವಿತ್ತು. ಇನ್ನೂ ಮುಂದುವರೆದು ಅವರೇ ಹೇಳುವಂತೆ “ತಮ್ಮ ಭಾವನೆಗಳನ್ನು ಪ್ರಖರತೆಯಿಂದ ಸಾರಲು ಗ್ರಂಥಸ್ಥ ಭಾಷೆಗೆ ಸತ್ವವಿಲ್ಲವೆನಿಸಿ, ಆ ಸತ್ವದ ಶೋಧಕ್ಕೆ ತನ್ನದೇ ಆದ ದಲಿತ ಆಡುಭಾಷೆಯ ಕ್ಷೇತ್ರವನ್ನೇ ಬಳಸಿಕೊಳ್ಳಬೇಕಾಯಿತು. ಈ ಸ್ವರೂಪದ ಆರಂಭದ ಪ್ರವೇಶ ಭಾಷೆಯೊಂದಿಗೆ ದಲಿತ ಸಂಸ್ಕೃತಿಯೇ ಎದ್ದು ಬರುವ ಅಥವಾ ಮೂಡಿಬರುವ ರೀತಿಯನ್ನು ಕಂಡಾಗ ಇದನ್ನೇ ವೈವಿಧ್ಯತೆಯಲ್ಲಿ ಬಳಕೆಗೆ ತರಲು ಪ್ರಯತ್ನಿಸಿರುವುದು ಕಂಡು ಬರುತ್ತದೆ. ಹೀಗಾಗಿ ದಲಿತ ಕೃತಿಗಳಲ್ಲಿ ವೈವಿಧ್ಯಮಯವಾದ ಪ್ರಾದೇಶಿಕತೆಯನ್ನೊಳಗೊಂಡ ಭಾಷಾ ಪ್ರಯೋಗವನ್ನು ಕಾಣುತ್ತೇವೆ. ಈ ಭಾಷೆ ಕೆಲವರಿಗೆ ‘ಶಿಲ್ಪದಲ್ಲಿ ಸಂಗೀತ ನುಡಿದಂತೆ ಭಾಸವಾದರೆ’ ಇನ್ನೂ ಕೆಲವರಿಗೆ ಅರಗಿಸಿಕೊಳ್ಳಲಾಗದ ತುತ್ತಾಗಿದೆ. ಈ ರೀತಿಯ ಭಾಷೆಯ ಬಳಕೆ ಕೇವಲ ಸಾಹಿತ್ಯಿಕ ಪ್ರಯೋಗದಿಂದ ಸಾಹಿತ್ಯ ಚರಿತ್ರೆಯಲ್ಲಿ ಮೈಲುಗಲ್ಲಾಗುವ ಉದ್ದೇಶ ಮಾತ್ರ ಹೊಂದಿರದೆ, ಭಾಷೆ ತಮ್ಮತನದ ಸ್ವಾಭಿಮಾನ, ಅದರೊಂದಿಗೆ ವ್ಯಕ್ತವಾಗುವ ಆತ್ಮವಿಶ್ವಾಸ, ಅಭಿವ್ಯಕ್ತಿಯ ಪ್ರಖರತೆ, ಜನಸಾಮಾನ್ಯನಿಗೆ ತಲುಪುವಿಕೆ, ಸಾಂಸ್ಕೃತಿಕ ನಿಷ್ಠೆ ಇವೆಲ್ಲವನ್ನೂ ಕೂಡಿಕೊಂಡಿದೆ” ಎನ್ನುತ್ತಾರೆ. ಈ ದಲಿತ ಸಾಹಿತ್ಯದ ಭಾಷೆಯ ಮೂಲ ಉದ್ದೇಶ ಅದರ ತಲ್ಲಣಗಳನ್ನು ಅಭಿವ್ಯಕ್ತಿಸುವುದು, ಆಮೂಲಕ ನಮ್ಮವರನ್ನು ಎಚ್ಚರಿಸುವುದೇ ಆಗಿತ್ತು.”[16]

ಇಂತಹ ದಲಿತ ಭಾಷೆಯ ಸಾಹಿತ್ಯ ಕೃತಿಗಳನ್ನು ಓದಿದ ಮೇಲೆ, ಇದು ಸಾಹಿತ್ಯ ಲೋಕ ಇದುವರೆಗೂ ಕಾಣದ ಹೊಸ ಅನಾವರಣ ಮತ್ತು ಭಾಷೆ ಎಂದೇ ಪ್ರತಿಕ್ರಿಯಿಸುತ್ತಾರೆ. ಅಂತಹ ಕೆಲವೊಂದು ಉದಾಹರಣೆಗಳನ್ನು ನಾವು ಕಂಡರೆ ದಲಿತ ಸಾಹಿತ್ಯ ಅದುವರೆಗೂ ಕಟ್ಟಿದ್ದ ಸಾಹಿತ್ಯ ಮೀಮಾಂಸೆ ಮತ್ತು ಸಾಹಿತ್ಯದ ಚೌಕಟ್ಟುಗಳನ್ನು ಹೇಗೆ ಬುಡಮೇಲು ಮಾಡಿದೆ ಎಂಬುದನ್ನು ತಿಳಿಯಬಹುದು.

"'ದಲಿತ ಸಾಹಿತ್ಯದ' ಬಗ್ಗೆ ಎಸ್. ಆರ್. ವಿಜಯ ಶಂಕರ್ "ಕನ್ನಡ ಸಾಹಿತ್ಯದಲ್ಲಿ ಈ ತನಕ ಇರದಿದ್ದ ಒಂದು ಕತ್ತಲ ಲೋಕದಿಂದ ಬಂದ ದಲಿತ ಲೇಖಕರು ಬಹಳ ಒರಟಾಗಿ ಬರೆಯುತ್ತಾರೆ. ನಾಜೂಕು ಅವರಿಗೆ ಬೇಡ, ಅವರ ಅನುಭವವೂ ನಾಜೂಕಿನದಲ್ಲ" (ಸಂಕ್ರಮಣ. ಸಂ 17. ಸಂಚಿಕೆ 4. 198 ಪುಟ 29)[17] ಎಂದು ಹೇಳಿದ್ದಾರೆ.

'ಹಂಪಣ್ಣ' ಅವರ ಬಗ್ಗೆ ಬರೆದ ಆರ್. ವಿ. ಭಂಡಾರಿ: "ವಾಚ್ಯವೂ ದಲಿತ ಧ್ವನಿಯ ಒಂದು ಸ್ಪಷ್ಟ ಲಕ್ಷಣವೇ ಆಗಿದೆ. ಆದ್ದರಿಂದ ಇಲ್ಲಿ ವಾಚ್ಯವೂ ಮಾನ್ಯ" (ಸಂಕ್ರಮಣ 1981).

ಸಿದ್ಧಲಿಂಗಯ್ಯನವರ ಬಗ್ಗೆ ಬರೆದ ಯಲಗುಂಡಿಗೆ ಮಂಜಯ್ಯ "ದಲಿತ ಸಾಹಿತ್ಯದಲ್ಲಿ ಸಿಟ್ಟು ರೋಷ ಪ್ರತಿಭಟನೆಯ ಧ್ವನಿಗಳು ಎದ್ದು ಕಾಣುತ್ತವೆ ಇದು ಅವರ ನೋವಿನ ಪ್ರತೀಕ" (ಮುಂಗಾರು ದೈನಿಕ 3–2–1985).[18]

ದೇವನೂರು ಮಹಾದೇವ ಅವರ 'ಒಡಲಾಳ'ದ ಬಗ್ಗೆ ಬರೆಯುವ ಸದಾಶಿವ ಎಣ್ಣೆಹೊಳೆ: "ಅದುವರೆಗೆ ಶೂದ್ರಾತಿ ಶೂದ್ರರೆನಿಸಿಕೊಂಡ ದಲಿತರ ಸಂಕಟ ಬವಣೆಗಳನ್ನು ಇಷ್ಟು ಸಮರ್ಪಕವಾಗಿ ಅಭಿವ್ಯಕ್ತಿಸಿದ ಉದಾಹರಣೆ ಮತ್ತೊಂದಿರಲಿಲ್ಲ. ದಲಿತರಾಗಿ ಹುಟ್ಟಿ ದಲಿತರ ಸಂಕಟ ಬೇನೆಗಳನ್ನು ತುಂಬ ಹತ್ತಿರದಿಂದ ಬಲ್ಲವರಾಗಿದ್ದ ಮಹಾದೇವ ಅವರು ಬದುಕಿನ ಕಠೋರ ಸತ್ಯವನ್ನು ತುಂಬಾ ಸಮರ್ಥವಾಗಿ ಅನಾವರಣ ಮಾಡಿದರು. ದಲಿತ ಕುಟುಂಬವೊಂದರ ಒಳಜೀವನ ಇಷ್ಟು ಸಮರ್ಥವಾಗಿ ಸಾಹಿತ್ಯದಲ್ಲಿ ಹಿಂದೆಂದೂ ಒಡಮೂಡಿಲ್ಲ" (ಗ್ರಂಥಲೋಕ: ಏಪ್ರಿಲ್ 1985)

ಇಂಥ ಅನೇಕರ ಹೇಳಿಕೆಗಳನ್ನು ಸಂಗ್ರಹಿಸಿದರೂ ಅವರೆಲ್ಲರ ಹಿಂದಿನ ಧ್ವನಿ ಒಂದೇ ಆಗಿದೆ. "ದಲಿತರ ಹಸಿವು, ದಲಿತರ ಒರಟುತನ, ದಲಿತರ ವಾಚ್ಯತನ ಇವೇ ದಲಿತ ಲೋಕದ ಸಾಮಾನ್ಯ ಸಂಗತಿಗಳಾಗಿದ್ದು, ಇವೇ ದಲಿತ ಸಾಹಿತ್ಯದ ಸರಕು ಮತ್ತು ಹಿನ್ನೆಲೆಯಾಗಿರುವಂಥವು ಎಂದು ಭಾವಿಸಲಾಗಿದೆ" ಎಂದು ಪುರುಷೋತ್ತಮ ಬಿಳಿಮಲೆಯವರು ದಾಖಲಿಸುತ್ತಾರೆ. ಇಲ್ಲಿ ನಾವು ಸಾಹಿತ್ಯವನ್ನು ಅದು ಬಿಂಬಿಸುವ ಬದುಕಿನ ಆಂತರ್ಯವನ್ನು ಕುರಿತು ನೋಡುವುದಕ್ಕಿಂತ ಹೆಚ್ಚಾಗಿ ದಲಿತ ಸಾಹಿತ್ಯಕ್ಕೆ ಹೆಚ್ಚಾಗಿ ಚೌಕಟ್ಟುಗಳನ್ನು ಹಾಕುತ್ತಿದ್ದೇವೆ. ವಿಮರ್ಶೆಗೆ, ಭಾಷೆಗೆ ಈಗಾಗಲೇ ಇದ್ದ ಮಾನದಂಡಗಳನ್ನೇ ಮತ್ತೆ, ಮತ್ತೆ ಬಳಸಿ ಸಾಹಿತ್ಯವೆಂದರೆ ಇದು ಮಾತ್ರ. ಭಾಷೆಗೆ ಪ್ರಮಾಣತೆಯನ್ನು ಆರೋಪಿಸಿ ಸಾಮಾಜಿಕ ಉಪಭಾಷೆ, ದಲಿತರ ಭಾಷೆ, ಕೇರಿಯ ಭಾಷೆ, ಗ್ರಾಮ್ಯಭಾಷೆಯೆಂದು ವಿಭಜಿಸುವ ಕ್ರಮವನ್ನು ಮಾಡುತ್ತಿರುತ್ತೇವೆ. ಯಾವುದೇ

ಒಂದು ಸಾಹಿತ್ಯದ ಭಾಷೆಗೆ ಸಂಸ್ಕೃತಿಯೂ ಹಿನ್ನೆಲೆಯಾಗಿರುತ್ತದೆ. ಅವೆರಡನ್ನೂ ಅರಿಯದೆ ಹೀಗೆ ನಿರ್ಧಿಷ್ಟಗೊಳಿಸುವುದು ಭಾಷಿಕವಾಗಿ ಒಂದು ಸಮುದಾಯ, ಪರಂಪರೆ, ಸಂಸ್ಕೃತಿ ಜೀವನ ಕ್ರಮ ಇವೆಲ್ಲವನ್ನೂ ನಾವು ನಿರಾಕರಿಸಿದಂತಾಗುತ್ತದೆ. ದೇವನೂರರ 'ಕುಸುಮಬಾಲೆ' ಕೃತಿ ಭಾಷೆಯನ್ನು ಕಂಡು ಈ ಕೃತಿಯನ್ನು ಕನ್ನಡಕ್ಕೆ ಭಾಷಾಂತರಿಸಬೇಕು ಎಂದರೆ ಯಾವ ಕನ್ನಡ, ಯಾರ ಕನ್ನಡಕ್ಕೆ ಭಾಷಾಂತ–ರಿಸಬೇಕು ಎಂಬುದೂ ಮುಖ್ಯ. ಭಾಷಿಕವಾಗಿ ಕವಿರಾಜ ಮಾರ್ಗಕಾಲಕ್ಕೇ ಪ್ರಮಾಣಿತ ಕನ್ನಡವೊಂದಿರಲಿಲ್ಲ ಎನ್ನುತ್ತಲೇ, ಪಂಪನು ಸಾಜದಪುಲಿಗೆರೆಯ ತಿರುಳ್ಗನ್ನಡದಲ್ಲಿ ತನ್ನ ಕೃತಿಯನ್ನು ರಚಿಸಿದ್ದೇನೆ ಎನ್ನುತ್ತಾನೆ. ಹಾಗೆಯೇ ಪ್ರಾದೇಶಿಕ ಭಿನ್ನತೆಯನ್ನು ದೇವನೂರರು ತಂದಿದ್ದಾರೆ. ಮಧುರ ಕವಿಯು ಹೇಳುವಂತೆ "ಪಂಡಿತರುಂ ವಿವಿಧಕಳಾ ಮಂಡಿತರುಂ ಕೇಳುತಕ್ಕ ಕೃತಿಯಂ ಕ್ಷಿತಿಯೊಳ್ ಕಂಡರ್ ಕೇಳ್ವದೆ ಗೊರವರ ಡುಂಡುಚಿಯೆ ಬೀದಿವರಿಯೆ ಬೀರನ ಕಥೆಯೇ" ಕಾವ್ಯವೆನ್ನುವುದು ಪಂಡಿತರು ಕಲಾಮಂಡಿತರಿಗೇ ಸೀಮಿತ. ಇದು ಗೊರವರ, ಬೀದಿಯವರ ಕಥೆಯಲ್ಲ ಎನ್ನುತ್ತಾನೆ. ಹೀಗಾಗಿ ಎಲ್ಲ ಕಾಲಕ್ಕೂ ತಿರಸ್ಕೃತಗೊಂಡ ಶೋಷಿತರ, ದಲಿತರ ಧ್ವನಿಗಳನ್ನು ದಲಿತ ಸಾಹಿತ್ಯ ದಲಿತರ ಭಾಷೆಯಲ್ಲಿಯೇ ತಂದಿರುವುದು ಅದರ ಹೆಮ್ಮೆ.

**ಅಡಿ ಟಿಪ್ಪಣಿಗಳು:**

1. ಕೆ. ಬಿ. ಸಿದ್ಧಯ್ಯನವರ ಖಂಡಕಾವ್ಯಗಳು, ಕೆ. ಬಿ. ಸಿದ್ಧಯ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. VIII.
2. ಹುಚ್ಚು ಮನಸ್ಸಿನ ಹತ್ತು ಮುಖಗಳು (2017), ಕೆ. ಶಿವರಾಮಕಾರಂತ, ಸಪ್ನ, ಬೆಂಗಳೂರು, ಪು.ಸಂ. 265.
3. ಚೋಮನದುಡಿ (2017), ಕೆ. ಶಿವರಾಮಕಾರಂತ, ಸಪ್ನ, ಬೆಂಗಳೂರು, ಪು.ಸಂ. 108.
4. ಶಿಷ್ಟ–ಪರಿಶಿಷ್ಟ (ವಿಮರ್ಶಾ ಲೇಖನಗಳು, 1992), ಡಾ. ಪುರುಷೋತ್ತಮ ಬಿಳಿಮಲೆ, ಮದಿಪು ಪ್ರಕಾಶನ, ಮಂಗಳೂರು, ಪು.ಸಂ. 124.
5. ಪ್ರೊ.ಬಿ ಕೃಷ್ಣಪ್ಪ (2010), ಡಾ. ಎಸ್. ಆರ್. ಕೇಶವ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು.ಸಂ. 23.
6. ಹೊಸಗನ್ನಡ ಸಾಹಿತ್ಯ ಚರಿತ್ರೆ (2017), ಎಲ್.ಎಸ್ ಶೇಷಗಿರಿ ರಾವ್, ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು, ಪು.ಸಂ. 252.

7. ದಲಿತರು ಭಾಷೆ ಮತ್ತು ಸಮಾಜ (2016), ಪಿ. ಮಹಾದೇವಯ್ಯ (ಸಂ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 50.
8. ದಲಿತ ಚಳುವಳಿಯ ಹೆಜ್ಜೆಗಳು (2021), ಶಿವಾಜಿ ಗಣೇಶನ್, ಬೆವರ ಹನಿ ಪ್ರಕಾಶನ, ತುಮಕೂರು, ಪು.ಸಂ. 14.
9. ಅದೇ, ಪು.ಸಂ. 21.
10. ಅದೇ, ಪು.ಸಂ. 24.
11. ದಲಿತರು ಭಾಷೆ ಮತ್ತು ಸಮಾಜ (2016), ಪಿ. ಮಹಾದೇವಯ್ಯ (ಸಂ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 50, ಪು.ಸಂ. 06.
12. ಬಡವರ ನಗುವಿನ ಶಕ್ತಿ: (2001), ಎಚ್. ದಂಡಪ್ಪ, ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು, ಪು.ಸಂ. 57.
13. ಅದೇ, ಪು.ಸಂ. 58.
14. ದಲಿತ ಸಾಹಿತ್ಯಯಾನ (2017), ಡಾ. ಅರವಿಂದ ಮಾಲಗತ್ತಿ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ಪು.ಸಂ. 47.
15. ಅದೇ, ಪು.ಸಂ. 47–48.
16. ಶಿಷ್ಟ–ಪರಿಶಿಷ್ಟ (ವಿಮರ್ಶಾ ಲೇಖನಗಳು, 1992), ಡಾ. ಪುರುಷೋತ್ತಮ ಬಿಳಿಮಲೆ, ಮದಿಪು ಪ್ರಕಾಶನ, ಮಂಗಳೂರು, ಪು.ಸಂ. 109–110.
17. ಅದೇ, ಪು.ಸಂ. 110.